

ಕೆಂಪು ಗುಲಾಬಿ ಮತ್ತು
ಹಳದಿ ಹೂಗಳ
ಜೋಡಣೆ



# ಡೈನಿಂಗ್ ಟೇಬಲ್‌ಗೆ ಹೂವಿನ ಅಲಂಕಾರ

ಹೂವು ಬಹೂಪಯೋಗಿ. ಅದು ಹೇಗಿದ್ದರೂ ಚೆನ್ನ. ಹೂವಿನ ಅಲಂಕಾರ ನೋಡಲು ಆಕರ್ಷಕ. ಡೈನಿಂಗ್ ಟೇಬಲ್ ಮೇಲೂ ವೈವಿಧ್ಯಮಯ ಹೂವಿನ ಅಲಂಕಾರ ಮಾಡಿ ಮನೆಯನ್ನು ಇನ್ನಷ್ಟು ಸುಂದರವಾಗಿಸಬಹುದು.

■ ಚಿತ್ರ ಬರಹ: **ಆರ್. ಸವಿತ**

‘ಹೂವು ಚೆಲುವೆಲ್ಲಾ ನಂದೆಂದಿತು’ ಎನ್ನುವ ಹಾಗೆ ಹೂಗಳು ಎಲ್ಲರ ಮನಸ್ಸಿಗೂ ಆಕರ್ಷಣೀಯವಾಗಿ ಕಾಣುತ್ತದೆ. ಮನೆಯಲ್ಲಿನ ಅಂದ ಹೆಚ್ಚಿಸಲು ಹೂಗಳೂ ಅಷ್ಟೇ ಮುಖ್ಯವಾಗಿರುತ್ತದೆ. ಹೂದಾನಿಯಲ್ಲೊಂದೇ ಹೂ ಜೋಡಣೆ ಅಲ್ಲದೆ ಊಟದ ಟೇಬಲ್ಲು, ಟೀಪಾಯ್ ಮೇಲೂ ಮೂಲೆಯ ಟೇಬಲ್ ಮೇಲೂ ಅಂದವಾಗಿ ಜೋಡಿಸಿ ಮನೆಯಲ್ಲಿನ ಸೊಬಗನ್ನು ಹೆಚ್ಚಿಸಬಹುದು.

ಹೂಗಳಲ್ಲಿ ಗುಲಾಬಿ, ಡೇರೆ, ಜರ್ಬೆರಾ, ಕಾರ್ನೀಶಿಯಾ, ಟುಲಿಪ್, ಸೇವಂತಿಗೆ, ಮಲ್ಲಿಗೆ ಹೀಗೆ ಈ ಹೂಗಳಲ್ಲಿ ಆಕರ್ಷಣೀಯವಾದ ಬಣ್ಣ, ಬಣ್ಣದ ಹೂಗಳೂ ದೊರೆಯುತ್ತವೆ. ಒಂದಕ್ಕೊಂದು ಬಣ್ಣಗಳು ಹೊಂದುವಂತೆ ಟೇಬಲ್ಲಿನ ಮೇಲೆ ಗಾಜಿನ ಅಂದವಾದ ತಟ್ಟೆಯಲ್ಲಿ ನೀರು ತುಂಬಿ ಹೂಗಳನ್ನು ಜೋಡಿಸಬಹುದು, ಎರಡು ದಿನಕ್ಕೊಮ್ಮೆ ನೀರು ಬದಲಿಸುತ್ತಿರಬೇಕು. ಹೂಗಳು ಸ್ವಲ್ಪ ಬಾಡಿದ ನಂತರ ಬೇರೆ ಹೂಗಳನ್ನು ಜೋಡಿಸಬಹುದು. ಮನೆಯಲ್ಲಿ ಮಕ್ಕಳಿದ್ದರೆ ಈ ಹೂಗಳ ಜೋಡಣೆಯನ್ನು ತಿಳಿಸಿಕೊಟ್ಟರೆ, ಅಂದವಾಗಿ ಜೋಡಿಸಿ ಖುಷಿ ಪಡುವುದೇ ಸರಿ.

ಹೂಗಳು ದೊರೆಯದಿದ್ದ ಸಂದರ್ಭದಲ್ಲಿ ಕೃತಕ ಹೂಗಳನ್ನು ಬಣ್ಣಗಳು ಒಂದಕ್ಕೊಂದು ಹೊಂದುವಂತೆ ಆಕರ್ಷಣೀಯವಾಗಿ ಕಾಣುವಂತೆ ಜೋಡಿಸಬಹುದು.

ಇದಲ್ಲದೇ ಮನೆಯಲ್ಲಿರುವ ಥರ್ಮೋಕೋಲ್ ಬಾಲ್ಸ್, ಪಾಪ್‌ಕಾರ್ನ್, ಪೆಬಲ್ಸ್, ಮುತ್ತುಗಳು

